KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant:
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

---

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

---

**Offence punishable under : SEC.314. of INDIAN PENAL CODE,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಅನ್ನಪೂರ್ಣ | ಪ್ರಾ.ಸಾ.- 03 |
| ಗಂಡನ ಹೆಸರು | ಃ | ಚಂದ್ರು | ಚಾ.ಸಾ.- 07 |
| ವಯಸ್ಸು | ಃ | 40 ವರ್ಷ | |
| ಉದ್ಯೋಗ | ಃ | ಕೂಲಿ ಕೆಲಸ | |
| ವಾಸ ಸ್ಥಳ | ಃ | ಮಠದ ಗದ್ದೆ | |

**ದಿನಾಂಕಃ 10-10-2022**

**ಪ್ರಮಾಣ ವಚನ ಬೋಧಿಸಲಾಯಿತು.**

**<u>ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ</u>**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ಶ್ರೀರಾಜ್ ನನಗೆ ಗೊತ್ತು. ಪ್ರಾಸಾ-1 ಸುರೇಶ, ನಾಗರತ್ನ ನನಗೆ ಗೊತ್ತು.

2. ನಾಗರತ್ನ ಈಗ ಜೀವಂತ ಇದ್ದಾಳೋ ಇಲ್ಲವೋ ನನಗೆ ಗೊತ್ತಿಲ್ಲ, ನಾಗರತ್ನ ಮತ್ತು ಆರೋಪಿಯ ಮಧ್ಯೆ ಇದ್ದ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ. ನಾಗರತ್ನ ಮೃತಪಟ್ಟಿದ್ದು ಏಕೆ ಎಂದು ನನಗೆ ಗೊತ್ತಿಲ್ಲ. ಈ ಘಟನೆ ಬಗ್ಗೆ ನನಗೇನು ಗೊತ್ತಿಲ್ಲ. ನಾನು ಪೊಲೀಸರಿಗೆ ಶವ ಪಂಚನಾಮೆ ಕಾಲಕ್ಕೆ ಹೇಳಿಕೆಯನ್ನು ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಪಿ.ಪಿ.ಯವರಿಂದಃ</u>**

3. ಆರೋಪಿ ಮತ್ತು ಮೃತ ನಾಗರತ್ನಳು 4 ವರ್ಷಗಳಿಂದ ಪ್ರೀತಿಸುತ್ತಿದ್ದರೆಂದು, ದೈಹಿಕ ಸಂಪರ್ಕ ಇತ್ತೆಂದು, ಆ ಕಾರಣದಿಂದ ನಾಗರತ್ನಳು ಗರ್ಭಿಣಿ ಆಗಿದ್ದು, ಈ ವಿಷಯ ತಿಳಿದ ಆರೋಪಿಯು ಮುನ್ನೆಚ್ಚರಿಕೆ ತೆಗೆದುಕೊಳ್ಳದೆ ಗರ್ಭಪಾತ ಆಗಲು ಮಾತ್ರೆಗಳನ್ನು ತಿನ್ನಲು ಕೊಟ್ಟಿದ್ದರಿಂದ ಅದನ್ನು ಸೇವಿಸಿದ ನಂತರ ನಾಗರತ್ನಳಿಗೆ ವಿಪರೀತ ಹೊಟ್ಟೆನೋವು ಮತ್ತು ರಕ್ತಸ್ರಾವ ಆಗಿ ಚಿಕಿತ್ಸೆ ಫಲಕಾರಿಯಾಗದೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ದಿನಾಂಕಃ 18-02-2019 ರಂದು ಬೆಳಗಿನ ಜಾವ 5.35 ಕ್ಕೆ ಮೃತಪಟ್ಟಳು ಎಂದು ಅವರ ಸಾವಿಗೆ ಆರೋಪಿಯೇ ಕಾರಣ ಎಂದು ಶವ ಮಹಜರ್ ಕಾಲಕ್ಕೆ ಈಗ ಓದಿ ಹೇಳಿದ ನಿ.ಪಿ.5 ರ ಪ್ರಕಾರ ಪೊಲೀಸರಿಗೆ ನಾನು ಹೇಳಿಕೆ ಕೊಟ್ಟೆನು ಎನ್ನುವುದು ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಮತ್ತು ಘಟನೆ ಬಗ್ಗೆ ಎಲ್ಲಾ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಐ.ಎಸ್.ಟಿ. ವಕೀಲರಿಂದಃ</u>**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ, ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-10-10-2022**

**(ಶುಭ ಗೌಡರ್)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS